**Test Booklet No.**
**परीक्षा पुस्तिका संख्या**

1 4 3 4 2 8

This booklet contains 20 pages.
इस पुस्तिका में 20 पृष्ठ हैं ।

# JBC – 12A

**PAPER II / प्रश्न-पत्र II**
**PART IV & V / भाग IV & V**
**Kannada Language Supplement**
**कन्नड़ भाषा परिशिष्ट**

**Test Booklet Code**
**परीक्षा पुस्तिका संकेत**

**Z**

**Do not open this Test Booklet until you are asked to do so.**
**इस परीक्षा पुस्तिका को तब तक न खोलें जब तक कहा न जाए ।**
**Read carefully the Instructions on the Back Cover (Page 19 & 20) of this Test Booklet.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**

**For instructions in Kannada see Page 2 of this booklet. / कन्नड़ में निर्देशों के लिए इस पुस्तिका का पृष्ठ 2 देखें ।**

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Blue / Black Ball Point Pen only** for writing particulars on this page / marking responses in the Answer Sheet.
5. The CODE for this Language Booklet is **Z**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part IV : Language I – (Kannada) *(Q. 91 to Q. 120)*
   Part V : Language II – (Kannada) *(Q. 121 to Q. 150)*
7. Part IV contains 30 questions for Language I and Part V contains 30 questions for Language II. In this Test Booklet, only questions pertaining to Kannada language have been given. **In case the language/s you have opted for as Language I and/or Language II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part V (Language II) in a language other than the one chosen as Language I (in Part IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल नीले/काले बॉल पॉइंट पेन** का प्रयोग करें ।
5. इस भाषा पुस्तिका का **संकेत** है **Z**. यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य प्रश्न पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग IV : भाषा I — (कन्नड़) *(प्र. 91 से प्र. 120)*
   भाग V : भाषा II — (कन्नड़) *(प्र. 121 से प्र. 150)*
7. भाग IV में भाषा I के लिए 30 प्रश्न और भाग V में भाषा II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा I और/या भाषा II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिएँ।**
8. **परीक्षार्थी भाग V (भाषा II) के लिए, भाषा सूची से ऐसी भाषा चुनें जो उनके द्वारा भाषा I (भाग IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

**SEAL**

Name of the Candidate (in Capitals) : ______________________________
परीक्षार्थी का नाम (बड़े अक्षरों में ) :
Roll Number (अनुक्रमांक) : in figures (अंकों में) ______________________________
: in words (शब्दों में) ______________________________
Centre of Examination (in Capitals) : ______________________________
परीक्षा केन्द्र (बड़े अक्षरों में ) :
Candidate's Signature : ______________ Invigilator's Signature : ______________
परीक्षार्थी के हस्ताक्षर : निरीक्षक के हस्ताक्षर :
Facsimile signature stamp of Centre Superintendent ______________________________

ಈ ಪ್ರಶ್ನೆ ಪುಸ್ತಿಕೆ **20** ಪುಟಗಳನ್ನು ಹೊಂದಿರುತ್ತದೆ.

ಪ್ರಶ್ನೆ ಪುಸ್ತಿಕೆ ಸಂಕೇತ

**Z**

# JBC–12A

## ಪ್ರಶ್ನೆ ಪತ್ರಿಕೆ II
## ಭಾಗ IV & V
### ಕನ್ನಡ ಭಾಷಾ ಪೂರಕ

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

***ಪರೀಕ್ಷಾರ್ಥಿಗಳಿಗೆ ಸೂಚನೆಗಳು :***

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು. ಇದು ಭಾಗ IV (ಭಾಷೆ I) ಅಥವಾ ಭಾಗ V (ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I ಮತ್ತು II **ಅಥವಾ** III ನ್ನು ಆವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು **ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **Z** ಆಗಿದೆ. ಉತ್ತರ ಪತ್ರಿಕೆಯ **ಪುಟ-2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆ ಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳು ಇವೆ IV ಮತ್ತೂ V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :
   ಭಾಗ IV : ಭಾಷೆ I — (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ V : ಭಾಷೆ II — (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಗಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಗಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆಮಾಡಿದ ಭಾಷೆಗಳು - ಕನ್ನಡ ಅಲ್ಲದೇ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ OMR ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of
Centre Superintendent ______________________

ಅಭ್ಯರ್ಥಿಗಳು **ಕನ್ನಡ**ವನ್ನು **ಭಾಷೆ-I** ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

→

# ಭಾಗ IV

## ಭಾಷೆ I

## ಕನ್ನಡ

***ಸೂಚನೆ :*** *ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 91 ರಿಂದ 96) ಅತ್ಯಂತ ಸೂಕ್ತವಾದ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಿ.*

ಜಾತಿಮತಭೇದಗಳ ಕಂದಕವು ಸುತ್ತಲೂ.
ದುರ್ಭೇದ್ಯವೆನೆ ಕೋಟಿಕೊತ್ತಲಗಳು.
ರೂಢಿರಾಕ್ಷಸನರಸುಗೈಯುವನು. ತೋಳ್ತಟ್ಟಿ
ತೊಡೆ ತಟ್ಟಿ ಕರೆಯುವನು ಸಂಗ್ರಾಮಕೆ !

ನಾವು ಹಿಂದೆಗೆವವೇ ? ವೀರ ತರುಣರು ನಾವು !
ಒಂದೆ ನೆಗೆತಕೆ ನೆಗೆವೆವೋ ಕಂದಕವನು.
ಕುಟ್ಟಿ ಪುಡಿಮಾಡುವೆವು ಕೋಟೆಗಳನು
ಎದೆಯ ಮೆಟ್ಟಿ ಮುರಿಯುವೆನಸುರ ರಟ್ಟೆಗಳನು !

ಇಂದು ಬಾಳಿದು ಕೂಲ ಕಾಳೆಗವು ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ ಪ್ರೀತಿ ದಿವದ ಬಯಕೆ !

**91.** "ಕರೆಯುವನು ಸಂಗ್ರಾಮಕೆ" – ಎಂತಹ ಸಂಗ್ರಾಮಕ್ಕೆ ಈ ಕರೆ ?

(1) ತೊಡೆ ತಟ್ಟಿ ಕುಸ್ತಿ ಮಾಡಲು

(2) ದುರ್ಭೇದ್ಯ ಕೋಟೆ ಬೇಧಿಸಲು

(3) ಕಂದಕವನ್ನು ಹಾರಲು

(4) ಜಾತಿ-ಮತ ಮೀರಿ ನಿಲ್ಲಲು

**92.** ಯಾರ ರಟ್ಟೆಗಳನ್ನು ಮುರಿಯುವರು ?

(1) ಅಸುರರದ್ದು

(2) ವೀರ ತರುಣರದ್ದು

(3) ಸಾಮಾನ್ಯ ಜನರದ್ದು

(4) ತಮ್ಮದೇ ರಟ್ಟೆ

**93.** ನರನ ಜೀವಿತದ ಮುಖ್ಯ ಉದ್ದೇಶ ಏನಾಗಬೇಕು ?

(1) ಹೊಟ್ಟೆ ತುಂಬುವುದು

(2) ದಾವಾಗ್ನಿಯಿಂದ ತಪ್ಪಿಸುವುದು

(3) ಕೂಲಕುಳಗ ಮಾಡುವುದು

(4) ಸಂಸ್ಕೃತಿ - ನರತೆ ಉಳಿಸುವುದು

**94.** ಕೆಳಗಿನ ಸಾಲುಗಳಿಗೆ ಗಣಪ್ರಸ್ತಾರ ಮಾಡಿದಾಗ ಬರುವ ಉತ್ತರ :

"ಕೇಂದ್ರವಾಗಿದೆ ನರನ ಜೀವಿತಕ್ಕೆ"

(1) – U – U – UUU – U U –

(2) – – – U U – U U – U – –

(3) – – U U U U U – U U – U

(4) – U – U U U U U – U – U

**95.** ಈ ಕವನದ ಸಾಲುಗಳಲ್ಲಿ ನೀಡಿರುವ ಕರೆ

(1) ಯುವ ಜನಾಂಗಕ್ಕೆ

(2) ರಟ್ಟೆ ಮುರಿಯುವವರಿಗೆ

(3) ಹೊಟ್ಟೆಪಾಡಿನ ಜನರಿಗೆ

(4) ರಾಕ್ಷಸರಿಗೆ

**96.** "ಅನ್ನದ ನ್ಯಾಯದಾವಾಗ್ನಿಯಲ್ಲಿ ಕರಗುತಿದೆ ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ"

(1) ಅನ್ನಕ್ಕಾಗಿ ಹೋರಾಟ

(2) ಬಡತನದ ಕಾರಣ ಉಳಿದವು ಹಿಂದೆ ಉಳಿದುದು

(3) ಅಸಹಾಯಕತೆ

(4) ಅಭಿಮಾನ, ಪ್ರೀತಿಯ ಕೊರತೆ

***ಸೂಚನೆ :*** *ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ನಂತರ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 97 ರಿಂದ 105) ಅತ್ಯಂತ ಸಮರ್ಪಕವಾದ ಉತ್ತರವನ್ನು ಆಯ್ಕೆಮಾಡಿ ಉತ್ತರಿಸಿ.*

ವಿಶ್ವ ಸೃಷ್ಟಿಯ ಬಗ್ಗೆ ಪ್ರಾಚೀನಕಾಲದಿಂದಲೂ ಭಿನ್ನತೆ ಇದೆ. ಕ್ರೈಸ್ತ, ಇಸ್ಲಾಂ ಹಾಗೂ ವೈದಿಕ ಧರ್ಮಗಳು ದೇವರನ್ನೇ ಸೃಷ್ಟಿಯ ಕರ್ತೃವನ್ನಾಗಿ ಕಂಡಿವೆ. ಆದರೆ ಬೌದ್ಧ, ಜೈನಧರ್ಮಗಳು ಮಾತ್ರ ವಿಶ್ವದ ಸೃಷ್ಟಿಗೆ ದೇವರ ಪರಿಕಲ್ಪನೆಯನ್ನು ತಿರಸ್ಕರಿಸಿ ಪ್ರಕೃತಿಯ ಪರಮಾಣುಗಳನ್ನು ಪ್ರತಿಪಾದಿಸಿದವು. ಪಂಚಭೂತಗಳು (ಪೃಥ್ವಿ, ಅಗ್ನಿ, ವಾಯು, ಗಾಳಿ, ನೀರು, ಆಕಾಶ) ಕೂಡ ಪರಮಾಣುವಿನ ಮೂಲ ಕಣಗಳೇ, ಹಬಲ್ ಪ್ರತಿಪಾದಿಸಿದ ಬಿಗ್‌ಬ್ಯಾಂಗ್ (ಮಹಾಸ್ಫೋಟಕ) ಸಿದ್ಧಾಂತ ಬಗ್ಗೆ ನಾವೆಲ್ಲಾ ಕೇಳಿದ್ದೇವೆ. ಸುಮಾರು 13.7 ಬಿಲಿಯ ವರ್ಷಗಳ ಹಿಂದೆ, ನಾವೀಗ ಕಾಣುತ್ತಿರುವ ಗ್ರಹ, ನಕ್ಷತ್ರ, ಉಲ್ಕೆ ಈ ಭೂಮಿ ಯಾವುದೂ ಅಸ್ತಿತ್ವದಲ್ಲಿರಲಿಲ್ಲ. ಅದೊಂದು ಬರಿ ಎಲೆಕ್ಟ್ರಾನ, ಹಾಗೂ ಪ್ರೋಟಾನ್‌ಗಳ ಮುದ್ದೆ. ಅದರ ಹೆಸರು ಅಂಡವಿಶ್ವ (ಅರಿಟುಛಿ ಜರಿರಿ) ಅದರ ಕಣಗಳು ನಿಧಾನವಾಗಿ ಸುತ್ತುತ್ತ, ಸುತ್ತುತ್ತ ತಮ್ಮ ವೇಗವನ್ನು ಹೆಚ್ಚಿಸಿಕೊಂಡವು. ವೇಗದ ಜೊತೆಗೆ ತಾಪವೂ ಹೆಚ್ಚಿತು. ಅಂಡ ವಿಶ್ವದ ಒಳಕುಸಿತ ಹಾಗೂ ಕವಚದ ಉಬ್ಬುವಿಕೆಯಿಂದ ಕಣಗಳು ಸಂಘರ್ಷಕ್ಕೊಳಗಾದವು.

ಒಂದು ಕಾಲಘಟ್ಟದಲ್ಲಿ "ಅಂಡವಿಶ್ವ" ಒಡೆದು ಚೂರು ಚೂರಾಗಿ ಸ್ಫೋಟವಾಗಿ ದಶದಿಕ್ಕುಗಳಿಗೆ ದಿಕ್ಪಾಪಾಲಾಗಿ ಚದುರಿ ಹೋಯಿತು. ಪೋತ್ಕರಿಸಿ ಚೆಲ್ಲಾಡಿದ ನಾನಾ ಬಗೆಯ ಶಕ್ತಿಯ ಕಣಗಳು ಬೆಳಕಿನ ವೇಗದಲ್ಲಿ ಸುತ್ತ ಪಸರಿಸಿದ್ದವು. ಹೊರಬಿದ್ದ ಆ ಬಹುತೇಕ ಪದಾರ್ಥಗಳು ಜಲಜನಕದ ಮೋಡಗಳೇ, ಅವುಗಳೇ ಬಿಸಿ ನಿಹಾರಿಕೆಗಳು (ನೆಬ್ಯೂಲಾಗಳು) ನಕ್ಷತ್ರಗಳು ಜನ್ಮತಾಳಿದ ಮೂಲ ದ್ರವ್ಯಗಳು. ರೂಪತಾಳಿದ ಕೋಟ್ಯಂತರ ನಕ್ಷತ್ರಗಳಿಗೆ ಬ್ರಹ್ಮಾಂಡ (ಗೆಲಾಕ್ಸಿ) ವೆಂದು ಹೆಸರು. ಲಕ್ಷಾಂತರ ನಕ್ಷತ್ರಪುಂಜಗಳ ಗುಂಪಿನಲ್ಲಿ ಅವನೊಬ್ಬನೇ ಸೂರ್ಯ. ವಿಶ್ವವಿಕಾಸದ ಹಾದಿಯಲ್ಲಿ ಸೂರ್ಯನಿಂದ ಸಿಡಿದುಬಂದ ದ್ರವ್ಯಗಳು ಗ್ರಹ, ಉಪಗ್ರಹ, ಕ್ಷುದ್ರಗ್ರಹ ಹಾಗೂ ಧೂಮಕೇತು, ಉಲ್ಕೆಗಳಾಗಿ ಜನ್ಮತಳೆದವು. ಭೂಮಿಯೊಂದೇ ಅದೃಷ್ಟಶಾಲಿ ಗ್ರಹ ಇದರಲ್ಲಿ ಮಾತ್ರ ಜೀವಿಸಂಕುಲದ ವಿಕಾಸವಾಗಿದೆ.

ಮಹಾಸ್ಫೋಟ ಸಿದ್ಧಾಂತ ಪ್ರತಿಪಾದನೆಯಾದ ಮೇಲೆ ಖಗೋಳ ಶಾಸ್ತ್ರದ ಕ್ಷೇತ್ರದಲ್ಲಿ ಬಿಸಿ ಬಿಸಿ ಚರ್ಚೆಗಳು ಆರಂಭವಾದವು. ತಾರಾಮಂಡಲಗಳು ದೂರ ದೂರ ಸರಿಯುತ್ತಿವೆ. ವಿಶ್ವ ಎಂಬುದು ನಿಂತ ನೀರಲ್ಲ ಅದು ವಿಸ್ತಾರವಾಗುತ್ತಿದೆ ಎಂಬ ಹೊಸ ವಿಷಯ ಚರ್ಚೆಗೆ ಗ್ರಾಸವಾಯ್ತು. ವಿಶ್ವದ ಸಮಸ್ತ ದ್ರವ್ಯಗಳು ದೂರ ದೂರ ಸರಿಯುತ್ತ ಎಲ್ಲಿಗೆ ಹೋಗುತ್ತವೆ ? ಎಂಬುದು ಪ್ರಶ್ನೆಯಾಯ್ತು. ಕಪ್ಪುರಂಧ್ರ, ಕಪ್ಪುಶಕ್ತಿ, ಕಪ್ಪುದ್ರವ್ಯ ಮುಂತಾದವುಗಳನ್ನು ಅಧ್ಯಯನ ಮಾಡಲು ವಿಶೇಷ ಪರಿಣಿತರು ಹುಟ್ಟಿಕೊಂಡರು. ಮಹಾಸ್ಫೋಟ (Big Bang) ಹೇಗೆ ಸಿಡಿಯಿತೊ ಹಾಗೆಯೇ ಮುಂದೊಂದು ದಿನ ಸಿಡಿದುಹೋದ ಸಮಸ್ತ ದ್ರವ್ಯಗಳು ಮತ್ತೆ ಒಂದು ಗೂಡಬಹುದು ಅದನ್ನು ಮಹಾ ಆಕುಂಚನ [Big Crownch] ಎಂದು ಹೆಸರಿಸಿದರು.

ಇಂಥ ಚರ್ಚೆಗಳು ಆರಂಭವಾದ ಸಂದರ್ಭದಲ್ಲೇ ಮಹಾಸ್ಫೋಟದ ನಂತರ ಬೆಳಕಿನ ವೇಗದಲ್ಲಿ ಸಂಚರಿಸಿದ, ಪಸರಿಸಿದ ಎಲ್ಲಾ ಶಕ್ತಿಯ ಕಣಗಳಿಗೆ, ತಡೆಗೋಡೆಯೊಂದು ಅಡ್ಡಬಂದಿರಲೇಬೇಕೆಂದು ವಿಜ್ಞಾನಿಗಳು ತರ್ಕಿಸಿದರು. ಚದುರಿ

ಹೋಗುತ್ತಿದ್ದ ಕಣಗಳಿಗೆ ದಿಗ್ಬಂಧನ ಹಾಕಿ ಹಿಡಿದಿಟ್ಟದ್ದರಿಂದಲೇ ಕಣಗಳೆಂಬ ದ್ರವ್ಯರಾಶಿ ಸೃಷ್ಟಿಯಾಗಿ ವಿಶ್ವವೆಂಬುದು ಅಸ್ತಿತ್ವಕ್ಕೆ ಬಂತೆಂದು ಕೆಲವರು ವಾದಿಸಿದರು. ನಿಹಾರಿಕೆ, ತಾರಾಮೇಘಗಳು, ಗೆಲಾಕ್ಸಿಗಳು ಹಾಗೂ ಸೌರಮಂಡಲ ಜನ್ಮತಾಳಬೇಕಾದರೆ ಮಹಾಸ್ಫೋಟವಾಗಿ ರಭಸದಿಂದ ಓಡುತ್ತಿದ್ದ ಶಕ್ತಿಯ ಕಣಗಳನ್ನು "ಮಾಯಾಪೊರೆ" ಯೊಂದು ಹಿಡಿದಿಟ್ಟರಲೇಬೇಕು. ಇಲ್ಲದಿದ್ದರೆ ಆ ಬೆಳಕಿನ ವೇಗದ ಕಣಗಳು ಚೆಲ್ಲಾಪಿಲ್ಲಿಯಾಗಿದ ದಶದಿಕ್ಕುಗಳಲ್ಲಿ ಚದುರಿ ಕಾಣದಂತೆ ಮಾಯವಾಗುತ್ತಿದ್ದವು. ಜಗತ್ತಿನಲ್ಲಿ ಎಲ್ಲ ಕಡೆ ಚರ್ಚೆಯಾಗುತ್ತಿರುವ ಇಂದಿನ ಹಿಗ್ಸ್‌ಬೋಸಾನ್ ಕಣಗಳು ಅಂದಿನ ವಿಜ್ಞಾನಿಗಳ ತಲೆಯಲ್ಲಿ ಹೊಕ್ಕ ಅಂಥ ಚಿಂತನೆಗಳೇ ಕಾರಣವಾದವು.

ಕಣ ಜಗತ್ತಿನ ವಿಶಿಷ್ಟ ಸನ್ನಿವೇಶವನ್ನು ಸಂಖ್ಯಾಶಾಸ್ತ್ರದ ಆಧಾರದ ಮೇಲೆ ಮೊಟ್ಟಮೊದಲು ಪ್ರತಿಪಾದಿಸಿದವರು ಭಾರತ ಅಪ್ರತಿಮ ವಿಜ್ಞಾನಿ ಸತ್ಯೇಂದ್ರನಾಥ್ ಬೋಸ್. 1924 ರಲ್ಲಿ ಅವರು ಒಂದು ಪ್ರಬಂಧ ಬರೆದು ಇಂಗ್ಲೀಷ್ ಪತ್ರಿಕೆಗೆ ಕಳುಹಿಸಿದರು. ಸಂಪಾದಕರು ಅದನ್ನು ಪ್ರಕಟಿಸಲಿಲ್ಲ. ನಂತರ ಅದರ ಒಂದು ಪ್ರತಿಯನ್ನು ಅಲ್ಬರ್ಟ್ ಐನ್‌ಸ್ಟೈನ್‌ರವರಿಗೆ ಕಳುಹಿಸಿದರು. ಪ್ರಬಂಧವನ್ನು ವಿಮರ್ಶಾತ್ಮಕವಾಗಿ ಮೆಚ್ಚಿದ ಐನ್‌ಸ್ಟೀನ್ ಅದನ್ನು ಜರ್ಮನ್ ಭಾಷೆಗೆ ತರ್ಜುಮೆ ಮಾಡಿ ಪ್ರಕಟಿಸಿದರು. ಸಾಪೇಕ್ಷವಾದದ ಜನಕ ಐನ್‌ಸ್ಟೀನ್ ಕೂಡ ತನ್ನ ಸಂಶೋಧನೆಯನ್ನು ಬೋಸ್ ಸಂಶೋಧನೆ ಜೊತೆಗೆ ತಳಕು ಹಾಕಿ ಹೊಸ ಮೆರಗು ನೀಡಿದರು. ಆಗ ಬೋಸಾನ್ ಕಣಗಳಿಗೆ ಜಾಗತ್ತಿಕ ಮನ್ನಣೆ ದೊರೆಯಿತು. ಜಗತ್ತಿನ ಭೌತ ವಿಜ್ಞಾನಿಗಳು ಬೋಸಾನ್ ಕಣಗಳನ್ನು ಹೆಚ್ಚು ಪ್ರಚಾರ ಮಾಡಿದರು. ಸತ್ಯೇಂದ್ರನಾಥ್‌ಬೋಸ್ ಹಾಗೂ ಅಲ್ಬರ್ಟ್ ಐನ್‌ಸ್ಟೀನ್ ರವರ ಸಂಶೋಧನೆಯನ್ನು ಆಧಾರವಾಗಿಟ್ಟುಕೊಂಡು ಬ್ರಿಟಿಷ್ ವಿಜ್ಞಾನಿ ಪೀಟರ್‌ಹಿಗ್ಸ್ 1964 ರಲ್ಲಿ ಮತ್ತೊಂದು ಸಿದ್ಧಾಂತವನ್ನು ಸಿದ್ಧಪಡಿಸಿದರು. ವಿಶ್ವದ ಎಲ್ಲಕಡೆಯೂ ಕಣಗಳು ಹರಡಿವೆ ಅವು ಇತರ ಕಣಗಳೊಂದಿಗೆ ಪ್ರತಿಸ್ಪಂದಿಸುತ್ತವೆ. ಅಂಥ ಸಂದರ್ಭದಲ್ಲಿ ಮತ್ತೊಂದು ಪ್ರಾಥಮಿಕ ಕಣ ಉದ್ಭವಿಸುತ್ತದೆ ಎಂದು ಹಿಗ್ಸ್ ವಿವರಣೆ ನೀಡಿದರು. ಅದೊಂದು ಪೊರೆಯಂಥ ತಡೆಗೋಡೆಯ ದ್ರವ್ಯ ಅದನ್ನು ಹಿಗ್ಸ್ ಕ್ಷೇತ್ರವೆಂದು ಕರೆಯಲಾಯಿತು. ಪೀಟರ್‌ಹಿಗ್ಸ್ ಅಂಥ ಕಣಗಳ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಕ್ಕಾಗಿ ಸಾವಿರಾರು ವಿಜ್ಞಾನಿಗಳಿಗೆ ಕರೆ ನೀಡಿದರು. ಹಿಗ್ಸ್‌ನ ವಿಚಾರಗಳು ಜಗತ್ತಿನ ವಿಜ್ಞಾನಿಗಳನ್ನು ತಲೆ ಕೆಡಿಸಿದವು.

**97.** 'ಅಂಡ ವಿಶ್ವದ' ಮುದ್ದೆಯಲ್ಲಿ ಇದ್ದವು.

(1) ಎಲೆಕ್ಟ್ರಾನುಗಳು, ಪ್ರೋಟಾನುಗಳು, ನ್ಯೂಟ್ರಾನುಗಳು

(2) ಪೃಥ್ವಿ, ಅಗ್ನಿ, ವಾಯು, ಗಾಳಿ, ನೀರು, ಆಕಾಶ

(3) ವೈದಿಕ, ಕ್ರೈಸ್ತ, ಇಸ್ಲಾಂ ಧರ್ಮಗಳು

(4) ಅಣು, ಪರಮಾಣು, ಕಣಗಳು

**98.** ಗ್ರಹ, ಉಪಗ್ರಹ, ಧೂಮಕೇತು _____ ಇವೆಲ್ಲವೂ.

(1) ಸೂರ್ಯನಿಂದ ಸಿಡಿದುಬಂದ ದ್ರವ್ಯಗಳು

(2) ಜಲಜನಕದ ಮೋಡದಿಂದ ಬಂದವು

(3) ಶಕ್ತಿಯ ಕಣಗಳಿಂದ ಸಿಡಿದು ಬಂದವು

(4) ಅಂಡವಿಶ್ವ ಒಡೆದು ಚೂರು ಚೂರಾದಾಗ ಬಂದವು

**99.** ಮುಂದೊಂದು ದಿನ, ಸಿಡಿದು ಹೋದ ಸಮಸ್ತ ದ್ರವ್ಯಗಳು ಮತ್ತೆ ಒಂದುಗೂಡಬಹುದು - ಇದರ ಹೆಸರು

(1) ಮಹಾ ಆಕುಂಚನ

(2) ಒಳಕುಸಿತ

(3) ಮಹಾಸ್ಫೋಟ

(4) ಗೆಲಾಕ್ಸಿ

**100.** ________ ನ್ನು ಮಾಯಾ ಪೊರೆ ಹಿಡಿದಿಟ್ಟರಲೇ ಬೇಕು.

(1) ಕಪ್ಪುದ್ರವ್ಯ

(2) ಗೆಲಾಕ್ಸಿ, ತಾರಾ ಮೇಘಗಳು, ನಿಹಾರಿಕೆ

(3) ರಭಸದಿಂದ ಓಡುತ್ತಿದ್ದ ಶಕ್ತಿಯ ಕಣಗಳು

(4) ಸೌರಮಂಡಲ

**101.** ವಿಶ್ವದಲ್ಲಿ ಎಲ್ಲ ಕಡೆಯೂ ಹರಡಿರುವ ಕಣಗಳು ಇತರ ಕಣಗಳೊಂದಿಗೆ ಪ್ರತಿಸ್ಪಂದಿಸಿದಾಗ ಮತ್ತೊಂದು ಪ್ರಾಥಮಿಕ ಕಣ ಉದ್ಭವಿಸುತ್ತದೆ. - ಈ ವಿವರಣೆ ನೀಡಿದವರು

(1) ಬೋಸಾನ್

(2) ಸತ್ಯೆಂದ್ರನಾಥ ಬೋಸ್

(3) ಆಲ್ಬರ್ಟ್ ಐನ್‌ಸ್ಟೀನ್

(4) ಪೀಟರ್ ಹಿಗ್ಸ್

**102.** ಇದು ಯಣ್ ಸಂಧಿಗೆ ಉದಾಹರಣೆ

(1) ಸತ್ಯೇಂದ್ರನಾಥ್

(2) ಅಸ್ತಿತ್ವದಲ್ಲಿರಲಿಲ್ಲ

(3) ಅಧ್ಯಯನ

(4) ಕೋಟ್ಯಾಂತರ

**103.** ದಶದಿಕ್ಕುಗಳು - ಈ ಸಮಾಸದ ಹೆಸರು

(1) ಕರ್ಮಧಾರಯ ಸಮಾಸ

(2) ತತ್ಪುರುಷ ಸಮಾಸ

(3) ದ್ವಿಗು ಸಮಾಸ

(4) ದ್ವಂದ್ವ ಸಮಾಸ

**104.** ಹೊಸದಾಗಿ ಏನನ್ನಾದರೂ ಕಂಡು ಹಿಡಿಯುವಿಕೆಗೆ ________ ಎಂದು ಹೆಸರು.

(1) ಸಿದ್ಧಾಂತ

(2) ಆವಿಷ್ಕಾರ

(3) ಸಂಶೋಧನೆ

(4) ಚಿಂತನೆ

**105.** ಭಾರತದ ಅಪ್ರತಿಮ ವಿಜ್ಞಾನಿ ಸತ್ಯೇಂದ್ರನಾಥ್ ಬೋಸ್ ಮಾಡಿದ ಅತ್ಯಂತ ಮಹತ್ವದ ಕಾರ್ಯವೆಂದರೆ

(1) ಕಣಜಗತ್ತಿನ ವಿಶಿಷ್ಟ ಸನ್ನಿವೇಶವನ್ನು ಸಂಖ್ಯಾಶಾಸ್ತ್ರದ ಆಧಾರದ ಮೇಲೆ ಮೊಟ್ಟಮೊದಲು ಪ್ರತಿಪಾದಿಸಿದರು

(2) ಐನ್‌ಸ್ಟೀನ್‌ರವರಿಗೆ ಪ್ರಬಂಧ ಕಳುಹಿಸಿದ್ದು

(3) ಮಹಾಪ್ರಬಂಧ ಬರೆದದ್ದು

(4) ಪ್ರಬಂಧವನ್ನು ಇಂಗ್ಲೀಷ್ ಪತ್ರಿಕೆಗೆ ಕಳುಹಿಸಿದ್ದು

***ಸೂಚನೆಗಳು :*** *ಅತ್ಯಂತ ಸಮಂಜಸವಾದ ವಿಕಲ್ಪ (Option) ವನ್ನು ಆಯ್ದು ಕೆಳಗೆ ಕೊಟ್ಟ ಪ್ರಶ್ನೆಗಳನ್ನು ಉತ್ತರಿಸಿ.*

**106.** ಬರೆಹದ ಭಾಗವೊಂದು ಸಂಕ್ಷಿಪ್ತ, ಸಂಪೂರ್ಣವಾಗಿದ್ದು, ಪ್ರಥಮ ಪುರುಷದಲ್ಲಿದ್ದು, ವಿಷಯಾಂತರ ಹಾಗೂ ಭಾವನಾತ್ಮಕ ಧ್ವನಿಯಲ್ಲಿರದೆ, ತಾರ್ಕಿಕವಾಗಿ ಜೋಡಿಸಲಾಗಿದ್ದರೆ, ಅದೊಂದು

(1) ಸುದ್ದಿಪತ್ರಿಕೆಯ ಲೇಖನ

(2) ವರ್ಗೀಕೃತ ಜಾಹೀರಾತು

(3) ಮೆಮೊರಾಂಡಮ್ (ಲಿಖಿತ ದಾಖಲೆ)

(4) ವರದಿ

**107.** ಮೊದಲನೇ ಮಾತುಗಾರ : ನಿಮ್ಮ ತಾಯಿಯವರು ಇನ್ನೂ ಮನೆಗೆ ಬಂದಿಲ್ಲವೇ ?

ಎರಡನೇ ಮಾತುಗಾರ :

ವಿದ್ಯಾರ್ಥಿಗಳ ಮಾತನಾಡುವ - ಕೇಳುವ ಕೌಶಲಗಳ ಮೌಲ್ಯನಿರ್ಣಯದ ಸಂದರ್ಭದಲ್ಲಿ ಈ ಸಂಭಾಷಣೆಯಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು

(1) ಮೊದಲನೇ ಮಾತುಗಾರ

(2) ಎರಡನೇ ಮಾತುಗಾರ

(3) ಎರಡೂ

(4) ಎರಡೂ ಅಲ್ಲ

**108.** ಬರೆಯುವಾಗ ಬಳಸಲಾಗುವ ಕೂಡಿಸುವ ಸಾಧನಗಳಲ್ಲಿ ಒಂದು ಯಾವುದೆಂದರೆ

(1) ಹೇಳಿಕೆ

(2) ಪದಗುಚ್ಛ

(3) ಪದಲೋಪ

(4) ಗುಣವಾಚಕ

**109.** ನಟರಿಗೆ ಸಮೂಹವಾದ ನಾಮಪದ

(1) ತಾರಾಗಣ

(2) ಅಧ್ಯಾಪಕ ವರ್ಗ

(3) ತಂಡ

(4) ಕಾಲೋನಿ

**110.** ಸೂರ್ಯಗ್ರಹಣ ಯಾವಾಗ ? ಎನ್ನುವ ಪ್ರಶ್ನೆ

(1) ಮುಂದುವರಿದ ವರ್ತಮಾನ ಕಾಲ

(2) ಭೂತ ಕಾಲ

(3) ವರ್ತಮಾನ

(4) ಭವಿಷ್ಯತ್ ಕಾಲ

**111.** ಎನ್ ಸಿ ಎಫ್ 2005 [3.1.4] ಶಿಫಾರಸುಗಳ ಪ್ರಕಾರ, ಬಾಲೆಯು ಅನೇಕ ವಿಷಯಗಳಲ್ಲಿ ಓದು ಮತ್ತು ಬರೆಹಕ್ಕೆ ವಿಶೇಷ ಗಮನ ನೀಡಬೇಕು ಅದರಲ್ಲೂ

(1) ಇತರೆ ವಿದೇಶಿ ಭಾಷೆಗಳು

(2) ಇಂಗ್ಲಿಷ್

(3) ಮಾತೃಭಾಷೆಗಳು

(4) ಹಿಂದಿ

**112.** ಭೋದನಾತ್ಮಕ ಶೈಲಿಯಲ್ಲಿ ಈ ಕೆಳಗಿನ ಯಾವ ಜೋಡಿಯಲ್ಲಿ ಕರ್ತರಿ ಪ್ರಯೋಗ / ಕರ್ಮಣಿ ಪ್ರಯೋಗವಿದೆ ?

(1) ವಿವರಣಾತ್ಮಕ / ಸಾಹಿತ್ಯಕ

(2) ಭಾವನಾತ್ಮಕ / ಸಂವೇದನಾತ್ಮಕ

(3) ಸಕ್ರೀಯ / ನಿಷ್ಕ್ರೀಯ

(4) ಸಾಮೂಹಿಕ / ವಿಶ್ಲೇಷಣಾತ್ಮಕ

**113.** ಭಾಷಾಕಲಿಕೆ ಮತ್ತು ಮೌಲ್ಯನಿರ್ಣಯದಲ್ಲಿ 'ಕರಸಂಪುಟ' ಸೂಚಿಸುವುದೇ ನೆಂದರೆ,

(1) ಪ್ರತಿ ಅವಧಿಯಲ್ಲಿ ವಿದ್ಯಾರ್ಥಿಗಳ ವರ್ತನೆಯ ಬಗ್ಗೆ ಶಿಕ್ಷಕ ಇಡುತ್ತಿರುವ ದಾಖಲೆ

(2) ನಿಯತಕಾಲಿಕ ಪೆನ್ನು - ಕಾಗದ ಪರೀಕ್ಷೆಗಳು

(3) ಪ್ರತಿ ಅವಧಿಯಲ್ಲಿ ನಡೆಸಲಾಗುವ ಮೌಖಿಕ ಪರೀಕ್ಷೆಗಳು

(4) ಒಂದು ಅವಧಿಯಲ್ಲಿ ಕಲಿಯುವವ ಸಾಧಿಸಿರುವ ಪ್ರಗತಿಯ ಬಗ್ಗೆ ಮಾಹಿತಿ ನೀಡುವ ಸಂಗ್ರಹ

**114.** ಓದುವಾಗ ವಿಸಂಕೇತಿಸು ಎಂದರೆ,

(1) ವಿದೇಶಿ ಭಾಷೆಯನ್ನು ಅರ್ಥಮಾಡಿಕೊಳ್ಳುವುದು

(2) ಐಸಿಬಿ ಯಲ್ಲಿ ಬಳಸಲಾಗುವ ಒಂದು ಕ್ರಿಯೆ

(3) ಕ್ಲಿಷ್ಟವಾದ ಗೊಂದಲವನ್ನು ಬಿಡಿಸುವುದು

(4) ವಿಶ್ಲೇಷಿಸುವುದು ಮತ್ತು ಅರ್ಥಮಾಡಿಕೊಳ್ಳುವುದು

**115.** 'ನಮ್ಮ ಗುರಿ ಏನು ? ಎಂದು ನೀನು ಕೇಳು. ನಾನು ಒಂದು ಪದದಲ್ಲಿ ಉತ್ತರಿಸಬಲ್ಲೆ : ಜಯ'. ಅಂತಹ ಪ್ರಶ್ನೆ

(1) ಶೈಲಿಯಾತ್ಮಕವಾಗಿದೆ

(2) ಚರುಕಾಗಿದೆ

(3) ಸವಿಸ್ತಾರವಾಗಿದೆ

(4) ಅಲಂಕಾರಿಕವಾಗಿದೆ

**116.** ರೈಲಿನಲ್ಲಿ ನಿಮ್ಮ ಸಹಪ್ರಯಾಣಿಕರೊಬ್ಬರಿಗೆ ಕಿಟಕಿಯ ಬಳಿ ಸೀಟು ಸಿಕ್ಕಿತು. ನೀವು ಅವನಿಗೆ ಕಿಟಕಿ ಮುಚ್ಚಲು ಹೇಳಬೇಕೆಂದು ಕೊಳ್ಳುತ್ತಿರಿ. ಆಗ ನೀವು ಯಾವ ರೀತಿ ಮನವಿ ಮಾಡುವಿರಿ ಎಂಬುದನ್ನು ಆಯ್ಕೆಮಾಡಿ.

(1) ನಿಮಗೆ ಕಿಟಕಿ ಮುಚ್ಚಲು ಸಾಧ್ಯವಾಗುವುದೇ ?

(2) ನನಗಾಗಿ ಕಿಟಕಿ ಮುಚ್ಚಿ

(3) ದಯಮಾಡಿ ಕಿಟಕಿ ಮುಚ್ಚಿ

(4) ನೀವು ಕಿಚಕಿ ಮುಚ್ಚುವಿರಾ ?

**117.** ಸಂಭಾಷಣೆಯನ್ನು ಓದಿ ಶಿಕ್ಷಕ

*ಶಿಕ್ಷಕ:* ನೀನು ಕತೆಪುಸ್ತಕ ಓದಲು ಬಯಸುವಿಯೇನು ?

*ವಿದ್ಯಾರ್ಥಿ:* ಹೌದು

*ಶಿಕ್ಷಕ:* ಹಾಗಾದರೆ, ಓದು

(1) ಮಾಹಿತಿಯನ್ನು ಅತ್ಯಂತ ಸೂಕ್ತವಾಗಿ ನೀಡುತಾರೆ

(2) ವಿದ್ಯಾರ್ಥಿಯ ಮನವಿಯನ್ನು ಖಚಿತ ಪಡಿಸುತ್ತಾರೆ

(3) ಪರ್ಯಾಯವಾದ ಭಾಷಾ ಚಟುವಟಿಕೆಯನ್ನು ನೀಡುತ್ತಾರೆ

(4) ಭಾಷೆಯ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಸವಿವರವಾಗಿ ನೀಡುತ್ತಾರೆ

**118.** ಇಲ್ಲಿ ಕ್ರಿಯೆಯನ್ನು ಸೂಚಿಸುವ ಪದ ಯಾವುದು ?

(1) ಆದಾಗ್ಯೂ

(2) ಸೃಷ್ಟಿಸುವುದು

(3) ಸ್ಕೇಬಿಂಗ್

(4) ಎಲ್ಲವೂ

**119.** ವಿಶೇಷಣಗಳ ಬಳಕೆಯ ಬಗ್ಗೆ ಕಲಿಯುವಾಗ

(1) ಅವುಗಳ ವಾಕ್ಯರಚನೆಗೆ ಸಂಬಂಧಿಸಿದ ಸ್ಥಾನ

(2) ಅವುಗಳ ಅರ್ಥ

(3) ಸಂದರ್ಭದಲ್ಲಿನ ಅರ್ಥ

(4) ಹಿಂದಿನ ಪದಗಳ ಅರ್ಥ

**120.** ಟಪಾಲುದಾರ ಬೆಳಗ್ಗೆ 11 ಗಂಟೆಗೆ ಟಪಾಲನ್ನು ತಲುಪಿಸಿದ. ಟಪಾಲುದಾರನಿಂದ ಟಪಾಲು ತಲುಪಿಸಲ್ಪಟ್ಟಿತು. ವಿದ್ಯಾರ್ಥಿಗಳ ಗಮನವನ್ನು ಕೆಳಕಂಡವುಗಳಲ್ಲಿ ಒಂದರ ಮೇಲೆ ಸೆಳೆಯುವ ಮೂಲಕ ಮೇಲಿನ ಎರಡು ಹೇಳಿಕೆಗಳಲ್ಲಿ ವ್ಯತ್ಯಾಸವನ್ನು ತೋರಿಸಬಹುದು

(1) ಕ್ರಿಯಾಪದ ಪ್ರಯೋಗಗಳಲ್ಲಿನ ಬದಲಾವಣೆ

(2) 'ಇಂದ' ಕರ್ಮಣಿ ಪ್ರಯೋಗದ ಬಳಕೆ

(3) ಪದಗಳಲ್ಲಿನ ಜೋಡಣೆಗಳ ವ್ಯತ್ಯಾಸ

(4) ಎರಡೂ ವಾಕ್ಯಗಳಲ್ಲಿನ ಕರ್ತೃ ಮತ್ತು ವಸ್ತುಗಳ ಪಾತ್ರ

ಅಭ್ಯರ್ಥಿಗಳು **ಕನ್ನಡ**ವನ್ನು **ಭಾಷೆ-II** ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

# ಭಾಗ V

## ಭಾಷೆ II

## ಕನ್ನಡ

***ಸೂಚನೆಗಳು :*** *ಅತ್ಯಂತ ಸಮಂಜಸವಾದ ವಿಕಲ್ಪ (Option) ವನ್ನು ಆಯ್ದು ಕೆಳಗೆ ಕೊಟ್ಟ ಪ್ರಶ್ನೆಗಳನ್ನು ಉತ್ತರಿಸಿ.*

**121.** ಒಂದು ಸಂಸ್ಥೆಯೊಳಗೆ ಶೈಕ್ಷಣಿಕ ಸಂಪನ್ಮೂಲಗಳನ್ನು ಹಂಚಿಕೊಳ್ಳಲು ಅವಕಾಶಮಾಡಿಕೊಡುವ ಸಂವಹನ ತಂತ್ರಜ್ಞಾನ

(1) ಏರ್‌ನೆಟ್

(2) ಇಂಟರ್‌ನೆಟ್ (ಅಂತರ್‌ಜಾಲ)

(3) ಇಂಟ್ರಾನೆಟ

(4) ಡೆಲ್‌ನೆಟ್

**122.** ವರ್ಚುವಲ್ ರಿಯಾಲಿಟಿ ಎಂದರೆ,

(1) ವಿಡಿಯೊ ಡಿಸ್ಕ

(2) ಟೆಲಿಕಾನ್ಫರೆನ್ಸಿಂಗ್

(3) ವಿಡಿಯೊಕ್ಹಾನ್ಫರೆನ್ಸಿಂಗ್

(4) ಕಂಪ್ಯೂಟರ್ ಜನರೇಶನ್ ಮೂಲಕ ದೃಷ್ಟಿಕರಣದ ಮುಂದುವರಿದ ಭಾಗ

**123.** ಪದಗಳ ಹಿಂಪದರಚನೆ (back-formation) ಗೆ ಉದಾಹರಣೆಗಳೆಂದರೆ,

(1) ಮಂತ್ರ (ಕನ್ನಡ/ಸಂಸ್ಕೃತ) ಮಂತ್ರವು (ಕನ್ನಡ)

(2) ಕಳ್ಳ > ಕಳ್ಳತನ ಮಾಡು

(3) ಮೋಟಾರು + ಹೋಟೆಲ್ > ಮೋಟೆಲ್

(4) ಪ್ರಯೋಗ + ರಹಿತ > ಪ್ರಯೋಗರಹಿತ

**124.** ಎರಡು ಪದವುಳ್ಳ ಸಂಯುಕ್ತ ಪದಗಳಿಗೆ ಉದಾಹರಣೆಗಳೆಂದರೆ,

(1) ಎಣ್ಣೆಬಾವಿ / ಮುದ್ರಣ ಕಾಗದ

(2) ತಲೆನೋವು / ಮಳೆ

(3) ರೊಟ್ಟಿ ಮತ್ತು ಪಲ್ಲೆ / ಕಾಲ ಮತ್ತು ಅಲೆ

(4) ಹವಾನಿಯಂತ್ರಿತ / ತೆರಿಗೆಪಾವತಿದಾರ

**125.** ಭಾಷಾ ಸಂಪಾದನೆ

(1) ಮಕ್ಕಳು ತಮ್ಮ ಸ್ಥಳೀಯ ಭಾಷೆಯನ್ನು ಕಲಿಯುವ ಪರಿಸರವನ್ನು ಅನುಕರಿಸಲು ಉದ್ದೇಶಿಸಿರುವ ಒಂದು ತಂತ್ರ

(2) ನೆನಪಿನಲ್ಲಿಡುವಿಕೆ ಮತ್ತು ಆವಶ್ಯಕ ಪದಸಂಪತ್ತಿನ ಬಳಕೆಯನ್ನು ಬೇಡುತ್ತದೆ

(3) ವ್ಯಾಕರಣದ ವಿಶ್ಲೇಷಣೆಗಳು ಮತ್ತು ಗ್ರಹಿಕೆಗೆ ನಿಯಮಬದ್ಧವಾದ ಪ್ರಯೋಗ ಹಾಗೂ ಪದಸಂಪತ್ತಿನ ನೆನಪಿನಲ್ಲಿಡುವಿಕೆಯನ್ನು ಒಳಗೊಂಡಿದೆ

(4) ಮಾನವ ಮೆದುಳಿನ ಸ್ವಾಭಾವಿಕ ಸಾಮರ್ಥ್ಯದಿಂದ ಸ್ಥಳೀಯ ಅಥವಾ ಎರಡನೆಯ ಭಾಷೆಯ ಕಲಿಕಾ ಪ್ರಕ್ರಿಯೆಯನ್ನು ಸೂಚಿಸುತ್ತದೆ

**126.** ಎನ್.ಸಿ.ಎಫ್. 2005 ರ ಪ್ರಕಾರ, ಬೋಧನೆಯ ಗುರಿಯೆಂದರೆ ________ ಸಾಕ್ಷರತೆಯ ಮೂಲಕ ಅಮೂರ್ತ ಆಲೋಚನೆ ಮತ್ತು ಜ್ಞಾನ ಸಂಪಾದನೆಗೆ ಒಂದು ಸಾಧನವನ್ನು ಒದಗಿಸುವುದು.

(1) ಶಾಸ್ತ್ರೀಯ ಭಾಷೆಗಳು

(2) ಎರಡನೇ ಭಾಷೆ

(3) ಮೊದಲನೇ ಭಾಷೆ

(4) ಮೂರನೇ ಭಾಷೆ

**127.** ಕ್ರಿಯಾಪದಗುಚ್ಛಕ್ಕೆ ಉದಾಹರಣೆಗಳೆಂದರೆ

(1) ಮುಚ್ಚಿಬಿಡು / ಹೊರಗೆ ಇಡು

(2) ಬಷ್‌ಸ್ಟ್ಯಾಂಡು / ಪಾರ್ಕಿಂಗ್ ಮೀಟರ್

(3) ಅಕ್ಕ ಪಕ್ಕ ನೋಡು / ಹುಡುಕು

(4) ಮರಳಿ ದೊರಕು / ಹುಡುಕು

**128.** ವಿಷಯ-ಕೇಂದ್ರಿತ ವಿಧಾನದಲ್ಲಿ ಕಲಿಕೆಯ ಅನುಭವಗಳು ಇದರ ಸುತ್ತ

(1) ಶೈಕ್ಷಣಿಕ ತಂತ್ರಜ್ಞಾನ

(2) ವಿದ್ಯಾರ್ಥಿಯ ಆಸಕ್ತಿಗಳು

(3) ಶಿಕ್ಷಕರ ವಿಷಯ ಪರಿಣತಿ

(4) ವಸ್ತು ವಿಷಯ

**129.** ಮೌಲ್ಯನಿರ್ಣಯದ ಮಾನದಂಡವೆಂದರೆ,

(1) ಅಂಕಗಳಿಕೆಯ ಉತ್ತರ

(2) ಮೌಲ್ಯನಿರ್ಣಯದ ಮಾರ್ಗಸೂಚಿ

(3) ಪ್ರಶ್ನೆಗನುಸಾರವಾಗಿ ಅಂಕ ಹಂಚಿಕೆ

(4) ವಿದ್ಯಾರ್ಥಿಯ ಸಾಮರ್ಥ್ಯದ ಸಾಮಾನ್ಯ ಎಣಿಕೆ

**130.** 'Flow' ಪದದಲ್ಲಿ 'ow' ನ ಧ್ವನಿಯ ಲಿಪ್ಯಂತರ

(1) /ou/

(2) /eu/

(3) /ew/

(4) /au/

**131.** ಒದುವಾಗ ಕೌಶಲಗಳನ್ನು ರೂಢಿಸಿಕೊಳ್ಳುವುದೆಂದೆ,

(1) ಅರ್ಥಮಾಡಿಕೊಳ್ಳುವುದು

(2) ಟಿಪ್ಪಣಿ - ತೆಗೆದುಕೊಳ್ಳುವುದು

(3) ಟಿಪ್ಪಣಿ - ಮಾಡಿಕೊಳ್ಳುವುದು

(4) ಸಾರಾಂಶ ಮಾಡುವುದು

**132.** ಇಂಗ್ಲಿಷ್ ಪಠ್ಯಕ್ರಮದಲ್ಲಿ ಸಂಭಾಷಣೆ ರಚನೆಯನ್ನು ಸೇರಿಸಿರುವುದು ಮೊದಲನೆಯದಾಗಿ ಇವನ್ನು ಪರೀಕ್ಷಿಸಲು

(1) ಸೃಜನಶೀಲತೆ

(2) ಬರೆಯುವ ನಿರರ್ಗಳತೆ

(3) ವ್ಯಾಕರಣಾತ್ಮಕ ನಿಖರತೆ

(4) ಸಂಭಾಷಣಾ ಕೌಶಲಗಳು

**133.** ಏನನ್ನು ಕಲಿಸಲಾಗಿದೆಯೋ ಅದು ಏನನ್ನು ಕಲಿಯಲಾಗಿದೆಯೋ ಅದಲ್ಲ. ಏಕೆಂದರೆ,

(1) ವಿದ್ಯಾರ್ಥಿಗಳು ವಿಭಿನ್ನ ಸಾಮರ್ಥ್ಯಗಳು, ವ್ಯಕ್ತಿತ್ವಗಳನ್ನು ಹೊಂದಿದ್ದು ಬೇರೆ ಬೇರೆ ರಿತಿಯ ಹಿನ್ನೆಲೆಯಿಂದ ಬಂದಿರುವವರಾಗಿರುತ್ತಾರೆ

(2) ಶಿಕ್ಷಕ ಅಥವಾ ವಿದ್ಯಾರ್ಥಿ ಯಾವುದೇ ಜ್ಞಾನಶಿಸ್ತನ್ನು ಸಂಪೂರ್ಣವಾಗಿ ಕರಗತಮಾಡಿಕೊಳ್ಳಲಾಗುವುದಿಲ್ಲ

(3) ವಿದ್ಯಾರ್ಥಿಗಳು ಅನೌಪಚಾರಿಕ ಚರ್ಚೆಯ ವೇಳೆ ಗಮನಕೊಡುತ್ತಾರೆ

(4) ಶಿಕ್ಷಕರ ಸಮಾಜೋ-ಆರ್ಥಿಕ ಮಟ್ಟ ವಿದ್ಯಾರ್ಥಿಗಳವಕ್ಕಿಂತ ತುಂಬ ಭಿನ್ನವಾಗಿದೆ

**134.** ಶೀರ್ಷಿಕೆ ವಾಕ್ಯ ಇವುಗಳಲ್ಲಿ ಒಂದರಲ್ಲಿನ ಮುಖ್ಯ ಆಲೋಚನೆಯನ್ನು ಹೊಂದಿರುತ್ತದೆ

(1) ಸಂಭಾಷಣೆ

(2) ಪ್ರಬಂಧ

(3) ಮಾತು

(4) ಪ್ಯಾರಾ

**135.** ರಾಚನಿಕ ವಾದವು ಒಂದು ಸಿದ್ಧಾಂತವಾಗಿದ್ದು, ಇಲ್ಲಿ ವಿದ್ಯಾರ್ಥಿಗಳು

(1) ತಮ್ಮದೇ ಆದ ಕಲಿಕಾ ನೆರವುಗಳನ್ನು ರಚಿಸಿಕೊಳ್ಳುತ್ತ ಆ ಮೂಲಕ ಸ್ವಯಂ ಅನುಭವವನ್ನು ಪಡೆದುಕೊಳ್ಳುತ್ತಾರೆ

(2) ಹೋಲಿಕೆಯಿಲ್ಲದ / ನಾನಾ ಮಾದರಿಗಳನ್ನು ಅಧ್ಯಯನ ಮಾಡುವಿಕೆ ಹಾಗೂ ಉಚಿತವಾದ ಅಂತ್ಯವನ್ನು ಕಂಡುಕೊಳ್ಳುತ್ತಾರೆ

(3) ವಸ್ತು ವಿಷಯಗಳನ್ನು ಸ್ವಯಂ ಅನುಭವಿಸುವ ಹಾಗೂ ಆ ಅನುಭವಗಳ ಮೇಲೆ ಬೆಳಕು ಚೆಲ್ಲುವಮೂಲಕ ಪ್ರಪಂಚದ ಬಗ್ಗೆ ತಮ್ಮದೇ ಆದ ಅರಿವು ಮತ್ತು ಜ್ಞಾನವನ್ನು ರೂಪಿಸಿಕೊಳ್ಳುತ್ತಾರೆ

(4) ಶಿಕ್ಷಕರಿಂದ ಅನುಕೂಲ ಪಡೆಯುತ್ತಾರೆ ಹಾಗೂ ತಮ್ಮದೇ ಆದ ಸಿದ್ಧಾಂತಗಳನ್ನು ಮರುಬೋಧಿಸಿಕೊಳ್ಳಲು ಬೇರೆ ಬೇರೆ ರೀತಿಯ ಮಾಧ್ಯಮವನ್ನು ಬಳಸುತ್ತಾರೆ

***ಸೂಚನೆ :*** *ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ನಂತರ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 136 ರಿಂದ 144.) ಅತ್ಯಂತ ಸೂಕ್ತವಾದ ಉತ್ತರವನ್ನು ಆಯ್ಕೆಮಾಡಿ ಉತ್ತರಿಸಿ.*

**ವಿಶ್ವ ಸಂಸ್ಥೆಯು ಭಾಷೆಗೆ ನೀಡಿರುವ ಮಹತ್ವ**

ವಿಶ್ವಸಂಸ್ಥೆಯು ವಿಶೇಷವಾಗಿ ಗಮನ ಹರಿಸಿರುವ ಕ್ಷೇತ್ರಗಳಲ್ಲಿ ಪ್ರಮುಖವಾದ ಒಂದು ಕ್ಷೇತ್ರ ಮಾನವ ಹಕ್ಕುಗಳು. ಇದರೊಳಗೇ ಭಾಷಾ ಸಮುದಾಯದ ಹಕ್ಕುಗಳನ್ನು ಅಡಕಗೊಳಿಸಿದ್ದಾರೆ. ಇದರ ಮೂಲ ಉದ್ದೇಶ ಪ್ರಪಂಚದ ಎಲ್ಲಾ ಭಾಷಿಕ ಸಮುದಾಯಗಳೂ ಕೂಡಾ ಉಳಿಯಬೇಕು. ಪ್ರತಿಕೊಂದು ಸಮುದಾಯವೂ ಕೂಡಾ ಮನುಕುಲದ ಪ್ರಗತಿಯಲ್ಲಿ ತಾನೂ ಭಾಗವಾಗಿರುವುದರ ಜೊತೆಯಲ್ಲೇ, ಇದಕ್ಕಾಗಿ ಕೊಡುಗೆ ನೀಡುತ್ತಾ ತನ್ನನ್ನು ತೊಡಗಿಸಿಕೊಳ್ಳಬೇಕು. ಇಂತಹ ಪಾಲುದಾರಿಕೆ ಸಾಧ್ಯವಾಗುವುದು ಪ್ರತಿಯೊಂದು ಸಮುದಾಯದ ಭಾಷೆ ಉಳಿದಾಗ, ಬೆಳೆದಾಗ ಮಾತ್ರ. ಕೆಲವು ಸಮುದಾಯಗಳ ಭಾಷೆಗಳು ಹಲವಾರು ಕಾರಣಗಳಿಂದಾಗಿ ಇಂದು ಆತಂಕ ಎದುರಿಸುತ್ತಿದೆ. ಹಾಗಾಗಿ ಇಂತಹ ಆತಂಕಗಳನ್ನು ನಿವಾರಿಸುವ ನಿಟ್ಟಿನಲ್ಲಿ, ಒಟ್ಟಾರೆ ಮನುಕುಲದ ಅಭಿವೃದ್ಧಿಯ ದೃಷ್ಟಿಯಿಂದ ಈ ಭಾಷಾಹಕ್ಕುಗಳನ್ನು ಗುರುತಿಸಿ ಘೋಷಿಸಲಾಗಿದೆ. ಇದು ಇಡೀ ಜಗತ್ತಿಗೆ ಅನ್ವಯಿಸುವಂತದ್ದು.

ಭಾರತ ದೇಶದಲ್ಲಿ ಇದೀಗ ಅನುಸರಿಸಲಾಗುತ್ತಿರುವ ಭಾಷಾ ನೀತಿಯು, ಹೇಗೆ ಇಂತಹ ಒಂದು ಸದುದ್ದೇಶಕ್ಕೆ ವಿರುದ್ಧವಾಗಿದೆ ಎಂಬುದನ್ನು ತಿಳಿದುಕೊಳ್ಳೋಣ. ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳಲ್ಲೊಂದಾದ UNESCO, ಜಗತ್ತಿನ ಭಾಷಾ ಸಮುದಾಯಗಳ ಕುರಿತು ಹೊರಡಿಸಿರೋ ಬಾರ್ಸಿಲೋನಾ ಭಾಷಾಹಕ್ಕುಗಳ ಘೋಷಣೆಯಲ್ಲಿ ಪ್ರತಿಯೊಂದು ಭಾಷಾ ಸಮುದಾಯದ ಹಕ್ಕುಗಳ ಬಗ್ಗೆ ಹೀಗೆ ಹೇಳಿದೆ :

**ಭಾಷಾ ಹಕ್ಕು ಘೋಷಣೆಯ ಉದ್ದೇಶ**

ಯುನೆಸ್ಕೋ ಹೊರತಂದಿರುವ ಈ ಭಾಷಾಹಕ್ಕುಗಳು : ಬಾರ್ಸಿಲೋನಾ ಘೋಷಣೆಯ ಉದ್ದೇಶ ಇಂತಿದೆ :

ಸ್ವಯಂ ಆಡಳಿತದ ಕೊರತೆ, ಜನಸಂಖ್ಯೆಯ ಕೊರತೆ, ಸಮುದಾಯದ ಕೆಲ ಭಾಗ ಅಥವಾ ಇಡೀ ಸಮುದಾಯವೇ

ಚದರಿ ಹೋಗಿರುವುದು, ಬಲಹೀನ ಆರ್ಥಿಕಮಟ್ಟ, ಸುಧಾರಿಸಿಲ್ಲದ ಭಾಷಾಮಟ್ಟ, ಬಲಶಾಲಿ ಸಮೂಹದ ನಂಬಿಕೆ / ಸಂಸ್ಕೃತಿಗಳಿಗೆ ಮುಖಾಮುಖಿಯಾಗಿರುವಿಕೆಗಳು ಒಂದು ಭಾಷಾ ಸಮುದಾಯದ ಉಳಿವಿಗೆ ಎದುರಾಗಿರುವ ಆತಂಕಗಳಾಗಿದ್ದು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಗುರಿಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸವಾಲುಗಳನ್ನೆದುರಿಸುವುದು ಅಸಾಧ್ಯವೆನ್ನುವ ಪರಿಸ್ಥಿತಿ ಉಂಟಾಗಿದೆ.

ರಾಜಕೀಯ ಗುರಿಗಳು : ಏಳಿಗೆಯ ದಿಕ್ಕಿನೆಡೆಗಿನ ಪ್ರಗತಿಯ ಪಯಣದಲ್ಲಿ ಎಲ್ಲಾ ಸಮುದಾಯಗಳೂ ಒಂದಾಗಿ ಸಾಗಲು ಪೂರಕವಾಗುವಂತಹ ಭಾಷಾ ವೈವಿಧ್ಯತೆಗೆ ಧಕ್ಕೆ ತರದಂತಹ ವ್ಯವಸ್ಥೆಯನ್ನು ರೂಪಿಸುವುದು.

ಸಾಂಸ್ಕೃತಿಕ ಗುರಿಗಳು : ಪ್ರಗತಿಯ ಹಾದಿಯಲ್ಲಿ ಜಗತ್ತಿನಾದ್ಯಂತ ಸಂಪರ್ಕ ಸಂವಹನ ಸಾಧಿಸಲು ಪೂರಕವಾಗಿರುವ, ಪ್ರತಿಯೊಂದು ಭಾಷಾ ಸಮುದಾಯವೂ, ವ್ಯಕ್ತಿಯೂ, ಜನಗಳೂ ಪಾಲುಗೊಳ್ಳಲು ಅನುಕೂಲಕರವಾದ ವ್ಯವಸ್ಥೆಯನ್ನು ರೂಪಿಸುವುದು.

ಆರ್ಥಿಕ ಗುರಿಗಳು : ಪ್ರಗತಿಗೆ ಪೂರಕವಾಗುವಂತಹ, ಎಲ್ಲಾ ಭಾಷಿಕ ಸಮುದಾಯಗಳ ಸರ್ವತೋಮುಖ ಏಳಿಗೆಗೆ, ಪರಿಸರಕ್ಕೆ, ಸಂಸ್ಕೃತಿಗೆ ಪೂರಕವಾಗುವಂತೆ ಪ್ರತಿಯೊಂದು ಭಾಷಾಸಮೂಹವೂ ತೊಡಗಿಸಿಕೊಳ್ಳಲು ಸಾಧ್ಯವಾಗುವಂತಹ ಮಾದರಿಯನ್ನು ರೂಪಿಸುವುದು.

ಈ ಮೂರು ಗುರಿಗಳ ಕಾರಣದಿಂದಾಗಿ ಇಲ್ಲಿ ಯಾವೊಂದು ರಾಷ್ಟ್ರವನ್ನಾಗಲೀ, ರಾಜಕೀಯ ಸಾರ್ವಭೌಮತ್ವವನ್ನಾಗಲೀ ಮಾನದಂಡವಾಗಿ ಪರಿಗಣಿಸದೆ ಭಾಷಿಕ ಸಮುದಾಯವನ್ನು ಪರಿಗಣಿಸಿ, ಸಮುದಾಯಗಳ ಭಾಷಿಕ ಹಕ್ಕಿನ ಬಗ್ಗೆ ಪ್ರತಿಪಾದಿಸಲಾಗಿದೆ. ಇಡೀ ಮನುಕುಲ ತನ್ನ ಭಾಷಾ ವೈವಿಧ್ಯತೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಉಳಿಸಿಕೊಂಡು ಸೌಹಾರ್ದಯುತವಾದ ಸಹಬಾಳ್ವೆಯನ್ನು ನಡೆಸುತ್ತಾ, ಇಡೀ ಮನುಕುಲವು ಏಳಿಗೆಯತ್ತ ಸಾಗಲು ಇದು ಅತ್ಯಗತ್ಯವೆಂದು ಭಾವಿಸಲಾಗಿದೆ.

ವೈಯುಕ್ತಿಕ ಮಟ್ಟದಲ್ಲಿ ವ್ಯಕ್ತಿಯೊಬ್ಬನಿಗೆ ತನ್ನತನವನ್ನು ಉಳಿಸಿಕೊಳ್ಳಲು ಇರುವ ಹಕ್ಕಿನ ಬಗ್ಗೆ ತಿಳಿಸುತ್ತಾ, ತಾನಿರುವ ನೆಲದ ಮುಖ್ಯವಾಹಿನಿಗೆ ಪೂರಕವಾಗಿರಬೇಕೆಂಬ ಸಣ್ಣ ಎಚ್ಚರಿಕೆಯನ್ನೂ ಇದು ನೀಡುತ್ತದೆ. ಇದರೊಟ್ಟಿಗೆ ಒಂದು ಭಾಷಾ ಸಮುದಾಯಕ್ಕೆ ತನ್ನದೇ ನೆಲದಲ್ಲಿ ಇರುವ ಹಕ್ಕುಗಳ ಬಗ್ಗೆ ತಿಳಿಸಲಾಗಿದೆ. ಅಂದರೆ ಕರ್ನಾಟಕದಲ್ಲಿ ಕನ್ನಡಿಗರಿಗೆ ಕನ್ನಡವನ್ನು ಎಷ್ಟರಮಟ್ಟಿಗೆ ಬಳಸುವ ಹಕ್ಕು ಇದೆ ಎಂಬುದನ್ನು ಇದು ತಿಳಿಸಿಕೊಡುತ್ತದೆ.

**136.** ಪ್ರತಿಯೊಂದು ಸಮುದಾಯವೂ ಭಾಗಿಯಾಗಬೇಕು ಜೊತೆಗೆ ತಮ್ಮ ಭಾಷೆಯನ್ನೂ ಉಳಿಸಿಕೊಳ್ಳಬೇಕು. ಆಗ

(1) ಅವರ ಸಮುದಾಯ ಉದ್ಧಾರವಾಗುತ್ತದೆ

(2) ಅವರ ಭಾಷೆ ಉಳಿಯುತ್ತದೆ

(3) ಮನುಕುಲದ ಅಭಿವೃದ್ಧಿ ಸಾಧ್ಯ

(4) ಭಾಷಾ ಹಕ್ಕು ಸಾಧಿಸಿದಂತಾಗುತ್ತದೆ

**137.** ಭಾಷಾ ಸಮುದಾಯದ ಉಳಿವಿಗೆ ಎದುರಾಗಿರುವ ಆತಂಕಗಳು

(1) ಭಾಷೆಯ ಬಗ್ಗೆ ದುರಭಿಮಾನ

(2) ಸಮುದಾಯದ ಕೆಲಭಾಗ ಅಥವಾ ಇಡೀ ಸಮೂಹ ಚದುರಿರುವುದು

(3) ಬೇರೆ ಭಾಷೆ ಪ್ರಬಲವಾಗಿರುವುದು

(4) ಬಲಶಾಲೀ ಸಮೂಹದ ಒತ್ತಡ

**138.** ಒಂದು ಭಾಷೆಯ ಉಳಿವಿಗೆ ಯುನೆಸ್ಕೋ ಮಾಡಿದ ಕೆಲಸ

(1) ಭಾಷಾಹಕ್ಕು ಬಾರ್ಸಿಲೋನಾ ಘೋಷಣೆ

(2) ತಿಳಿವಳಿಕೆ ನೀಡುವುದು

(3) ನಿಘಂಟು ತಯಾರಿಸುವುದು ಅಥವಾ ತಯಾರಿಸಲು ಪ್ರೋತ್ಸಾಹ ಕೊಡುವುದು

(4) ಜನರ ಆರ್ಥಿಕಮಟ್ಟ ಸುಧಾರಿಸುವುದು

**139.** ಬಾರ್ಸಿಲೋನಾ ಘೋಷಣೆಯ ಮೂಲಭೂತ ಉದ್ದೇಶ

(1) ಆರ್ಥಿಕ ಗುರಿಗಳು

(2) ರಾಜಕೀಯ ಗುರಿಗಳು

(3) ಸಾಂಸ್ಕೃತಿಕ ಗುರಿಗಳು

(4) ಸಮುದಾಯಗಳ ಭಾಷೆಯ ಹಕ್ಕು

**140.** ಇಡೀ ಮನುಕುಲ ತನ್ನ ಭಾಷಾ ವೈವಿಧ್ಯತೆ, ಸಾಂಸ್ಕೃತಿಕ ವೈವಿಧ್ಯತೆ ಉಳಿಸಿಕೊಂಡು, ಹೊಂದಿಕೊಂಡು, ಜೀವನ ಮಾಡುತ್ತಾ ಅಭಿವೃದ್ಧಿ ಹೊಂದಲು ಅತ್ಯಗತ್ಯವಾದುದು

(1) ಸೌಹಾರ್ದಯುತ ಸಹಬಾಳ್ವೆ

(2) ಸಮುದಾಯಗಳ ಭಾಷೆಯ ಹಕ್ಕು

(3) ರಾಜಕೀಯ ಸಾರ್ವಭೌಮತ್ವ

(4) ಎಲ್ಲಾ ಭಾಷೆಗಳ ಒತ್ತಡ

**141.** ಭಾಷಾ ಹಕ್ಕುಗಳನ್ನು - ಇಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯ

(1) ಚತುರ್ಥ ವಿಭಕ್ತಿ

(2) ದ್ವಿತೀಯಾ ವಿಭಕ್ತಿ

(3) ಪ್ರಥಮಾ ವಿಭಕ್ತಿ

(4) ತೃತೀಯಾ ವಿಭಕ್ತಿ

**142.** ಇದರಲ್ಲಿ ಜೋಡುನುಡಿ ಗುರುತಿಸಿ

(1) ಪ್ರಗತಿಗೆ ಪೂರಕ

(2) ಬಲಶಾಲಿ

(3) ಉಳಿದಾಗ ಬೆಳೆದಾಗ

(4) ಮುಖಾಮುಖಿ

**143.** ________ ಅಂಗ ಸಂಸ್ಥೆ UNESCO.

(1) UNESCO ಒಂದು ಸ್ವಾಯತ್ತ ಸಂಸ್ಥೆ

(2) ಕರ್ನಾಟಕ ಭಾಷಾ ಪ್ರೇಮಿಗಳ

(3) ಭಾರತೀಯ ಭಾಷಾ ಸಂಬಂಧಿ ಸಂಸ್ಥೆಯ

(4) ವಿಶ್ವ ಸಂಸ್ಥೆಯ

**144.** ಘೋಷಣೆ ಪದದ ಅರ್ಥ

(1) ಸಹಿಮಾಡು

(2) ಹೇಳಿಕೆ ನೀಡು

(3) ತಿಳಿಯಪಡಿಸು

(4) ಎಲ್ಲರಿಗೂ ತಿಳಿಯುವಂತೆ ಸಾರುವುದು

***ಸೂಚನೆ :*** *ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ನಂತರ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 145 ರಿಂದ 150) ಅತ್ಯಂತ ಸಮರ್ಪಕವಾದ ಉತ್ತರವನ್ನು ಆಯ್ಕೆಮಾಡಿ ಉತ್ತರಿಸಿ.*

ಸರಾಸರಿ ನಮ್ಮ ಜೀವಿತದ ಮೂರನೇ ಒಂದು ಭಾಗವನ್ನೇ ನಿದ್ರೆಯಲ್ಲಿ ಕಳೆಯುತ್ತೇವೆ. ನಿದ್ರೆ ಮಾಡದಿದ್ದರೆ ಅಂದು ನಮ್ಮ ದೇಹದ ಮತ್ತು ಮನಸ್ಸಿನ ಸ್ಥಿತಿ ಚೆನ್ನಾಗಿರುವುದಿಲ್ಲ. ನಿದ್ರೆಗೆಟ್ಟೆಯೋ ಬುದ್ಧಿಗೆಟ್ಟೆಯೋ ಎಂಬ ಗಾದೆಯೇ ಇದೆ. ಹಾಗಾದರೆ ನಿದ್ರೆಯಲ್ಲಿ ಏನಾಗುತ್ತದೆ. ಅದು ಹೇಗೆ ನಮಗೆ ಅವಶ್ಯಕ ನೋಡೋಣ.

ನಿದ್ರೆಯಿಂದ ನಮ್ಮ ದೇಹ ಮತ್ತು ಮನಸ್ಸಿಗೆ ವಿಶ್ರಾಂತಿ ದೊರೆಯುತ್ತದೆ. ತಲೆಯ ಮೇಲೆ ವಿವಿಧ ಭಾಗಗಳಲ್ಲಿ ವಿದ್ಯುತ್ ಸರಳುಗಳನ್ನಿಟ್ಟು ಮಿದುಳಿನ ವಿದ್ಯುತ್ ಚಟುವಟಿಕೆಗಳನ್ನು ಮುದ್ರಿಸಿ, ಈ ದಾಖಲೆ (ಇಇಜಿ = ನಿದ್ರೆಯ ಮಿದುಳಿನವಿದ್ಯುತ್ ಬರವಣಿಗೆ) ಯನ್ನು ಅಧ್ಯಯನ ಮಾಡಿದ್ದರಿಂದ, ಬಗ್ಗೆ ನಮಗೆ ಹಲವಾರು ಉಪಯುಕ್ತ ಮಾಹಿತಿ ದೊರೆತಿದೆ. ಎರಡು ಹಂತಗಳ ನಿದ್ರೆಯನ್ನು ನಾವು ಗುರುತಿಸಬಹುದು. ಒಂದು ಸ್ಲೋವೇವ್ ಅಥವಾ ನಾನ್ ರ್‍ಯಾಪಿಡ್ ಐ ಮೂವ್‌ಮೆಂಟ್ ನಿದ್ರೆ. ಎರಡನೆಯದು ರ್‍ಯಾಪಿಡ್ ಐ ಮೂವ್‌ಮೆಂಟ್ (ಆರ್‌ಇಎಂ) ನಿದ್ರೆ. ಸ್ಲೋವೇವ ನಿದ್ರೆಯಲ್ಲಿ ಕಣ್ಣು ಗುಡ್ಡೆಗಳು ನಿಶ್ಚಲವಾಗಿರುತ್ತವೆ. ನಿಧಾನಗತಿಯ ತರಂಗಗಳು ವಿದ್ಯುತ್ ಬರವಣಿಗೆಯಲ್ಲಿ ದಾಖಲಾಗುತ್ತವೆ. ದೇಹದ ಮಾಂಸ ಖಂಡಗಳು ಸಡಿಲ ಗೊಳ್ಳುತ್ತವೆ. ಹೃದಯದ ಬಡಿತ ನಿಧಾನವಾಗಿ ಉಸಿರಾಟವು ಆಳವಾಗಿ ಕ್ರಮಬದ್ಧವಾಗುತ್ತವೆ. ದೇಹದ ಉಷ್ಣತೆಯೂ ತಗ್ಗುತ್ತದೆ. ಹೀಗಾಗಿ ದೇಹದ ಶಕ್ತಿಯ ಉಳಿತಾಯವಾಗುತ್ತದೆ. ಪಿಟ್ಯೂಟರಿ ಗ್ರಂಥಿ ತನ್ನ ಚೋದನಿಕೆಯನ್ನು ರಕ್ತದೊಳಕ್ಕೆ ಬಿಡುಗಡೆ ಮಾಡುತ್ತದೆ. ದೇಹದ ಅಂಗಾಂಗಗಳು ರಿಪೇರಿಯಾಗಲು, ಬೆಳೆಯಲು ಇದರಿಂದ ಸಹಾಯವಾಗುತ್ತದೆ. ಮಿದುಳ ಕಾಂಡದಲ್ಲಿರುವ ನ್ಯೂಕ್ಲಿಯೈ ಆಫ್ ರ್‍ಯಾಂಫ್ ಎಂಬ ಭಾಗವು ಸೆರೋಟೋನಿನ್ ಎನ್ನುವ ನರವಾಹಕವನ್ನು ಸ್ರವಿಸಿ, ಈ ಸ್ಲೋವೇವ್ ನಿದ್ರೆ ಉಂಟಾಗುವಂತೆ ಮಾಡುತ್ತದೆಂದು ನಂಬಲಾಗಿದೆ.

ವ್ಯಕ್ತಿ ನಿದ್ರಿಸಲಾರಂಭಿಸಿದ ಒಂದು ಘಂಟೆಯ ತರುವಾಯ ಆರ್ ಇ ಎಂ ಹಂತದ ನಿದ್ರೆ ಪ್ರಾರಂಭವಾಗುತ್ತದೆ. ಆಗ ಕಣ್ಣುಗುಡ್ಡೆಗಳು ಅವಿರತವಾಗಿ ಚಲಿಸಲಾರಂಭಿಸುತ್ತವೆ. ಕನಸುಗಳು ಬೀಳುತ್ತವೆ. ಮಾಂಸಖಂಡಗಳು ಅರಳೆಯಂತೆ ಮೃದುವಾಗುತ್ತವೆ. ಕೆಲವು ಸಲ ಅದುರುತ್ತವೆ. ಉಸಿರಾಟ, ಹೃದಯ ಬಡಿತಗಳಲ್ಲಿ ಏರಿಳಿತಗಳಾಗುತ್ತದೆ. ಇದು ಹತ್ತು ಹನ್ನೆರಡು ನಿಮಿಷಗಳ ಕಾಲ ಇರುತ್ತವೆ. ಈ ಅವಧಿಯಲ್ಲಿ ವ್ಯಕ್ತಿಯನ್ನು ಎಚ್ಚರಿಸಿದರೆ, ತಾನು ಕನಸು ಕಾಣುತ್ತಿದ್ದುದಾಗಿ ಒಪ್ಪಿಕೊಳ್ಳುತ್ತಾನೆ. ಇದಾದನಂತರ ಮತ್ತೆ ಸ್ಲೋವೇವ್ ನಿದ್ರೆ ಶುರುವಾಗುತ್ತದೆ. ಅಂದರೆ ಒಂದು ರಾತ್ರಿಯಲ್ಲಿ ಸ್ಲೋವೇವ್ ನಿದ್ರೆ ಮತ್ತು ಆರ್.ಇ.ಎಂ. ನಿದ್ರೆಯ ಚಕ್ರ ಐದಾರು ಬಾರಿ ಸುತ್ತುತ್ತದೆ. ಹತ್ತು ಹನ್ನೆರಡು ನಿಮಿಷಗಳ ಕಾಲ ಕನಸನ್ನು, ಐದಾರುಬಾರಿ ಕಾಣುತ್ತೇವೆ. ಆದರೆ ಕೊನೆಯ ಅವಧಿಯ ಕನಸನ್ನು ಬಿಟ್ಟು ಉಳಿದೆಲ್ಲವೂ ನೆನಪಿನಲ್ಲಿ ಉಳಿಯದು. ಕನಸಿನ ಮುಖಾಂತರ ನಾವು ನಮ್ಮ ಮನಸ್ಸಿನ ಅಹಿತ ಹಾಗೂ ಆತಂಕಕಾರಿ ಭಾವನೆಗಳನ್ನು ಮತ್ತು ಆಸೆ ನಿರಾಶೆಗಳನ್ನು, ಹುದುಗಿಟ್ಟ ಅನುಭವಗಳನ್ನು ಪ್ರಕಟಿಸಿ, ಒತ್ತಡವನ್ನು ಕಡಿಮೆ ಮಾಡಿ ಕೊಂಡು, ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳುತ್ತೇವೆ. ಆದ್ದರಿಂದ ನಿದ್ರೆ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಹಕಾರಿ ಎಂದು ತಿಳಿಯುತ್ತದೆ. ವ್ಯಕ್ತಿ ನಿದ್ರೆ ಮಾಡುವಂತೆ ಅಥವಾ ಎಚ್ಚರವಾಗಿರುವಂತೆ ನಿಯಂತ್ರಿಸುವ ಕೇಂದ್ರ ಮಿದುಳಿನ ಹೈಪೋಥೆಲಾಮಸ್ (ಕೆಳ ತಿರಗುಳಿ) ನಲ್ಲಿದೆ. ಅದೊಂದು ಸ್ವಯಂನಿಯಂತ್ರಿತ ವ್ಯವಸ್ಥೆ. ದೀರ್ಘಕಾಲದ ಅಭ್ಯಾಸ ಮತ್ತು ಪರಿಸರದ ಅಂಶಗಳಿಂದ ಒಂದು ನಿರ್ದಿಷ್ಟ ಕ್ರಮವನ್ನು ತನಗೆ ತಾನೇ ರೂಪಿಸಿಕೊಳ್ಳುತ್ತದೆ. ಒಂದು ತಿಂಗಳು ರಾತ್ರಿ ಪಾಳಿ ಮಾಡುವ ವ್ಯಕ್ತಿ, ಮರುತಿಂಗಳಲ್ಲಿ ಹಗಲು ಪಾಳಿ ಮಾಡುತ್ತಾನೆ. ಆಗ ಆ ವ್ಯವಸ್ಥೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕು.

**145.** ನಿದ್ದೆಯ ಬಗ್ಗೆ ಕೆಲವೊಂದು ಉಪಯುಕ್ತ ಮಾಹಿತಿ ದೊರೆತದ್ದು

(1) ಹೃದಯದ ಬಡಿತ ನಿಧಾನವಾಗಿ, ಉಸಿರಾಟ ಕ್ರಮಬದ್ಧವಾದ ಕಾರಣ

(2) ದೇಹ ಮತ್ತು ಮನಸ್ಸಿಗೆ ವಿಶ್ರಾಂತಿ ದೊರೆತ ಕಾರಣ

(3) ದೇಹದ ಉಷ್ಣತೆ ತಗ್ಗಿದ್ದು ಗೊತ್ತಾದ ಕಾರಣ

(4) ನಿದ್ದೆಯಲ್ಲಿ ಮಿದುಳಿನ ವಿದ್ಯುತ್ ಬರವಣಿಗೆ (EEG) ಅಧ್ಯಯನ ಮಾಡಿದ್ದರಿಂದ

**146.** ನಾವು ಮನಸ್ಸಿನ ಅಹಿತ ಮತ್ತು ಆತಂಕಕಾರಿ ಭಾವನೆಗಳನ್ನು ಮತ್ತು ಆಸೆ-ನಿರಾಶೆಗಳನ್ನು ಹುದುಗಿಟ್ಟ ಅನುಭವಗಳನ್ನು ಪ್ರಕಟಿಸಿ ಒತ್ತಡವನ್ನು ಕಡಿಮೆ ಮಾಡಿಕೊಂಡು ಮಾನಸಿಕ ಸಮತೋಲನ ಕಾಪಾಡಿಕೊಳ್ಳುವುದು

(1) ನಿದ್ದೆಯಲ್ಲಿ ಕನಸು ಕಾಣುವುದರಿಂದ

(2) ನಿದ್ದೆ ಮಾಡುವುದರಿಂದ

(3) ಧೈರ್ಯ ಸಾಹಸಗಳಿಂದ

(4) ಸದಾ ಎಚ್ಚರ ವಾಗಿರುವುದರಿಂದ

**147.** ಮಿದುಳಿನ ಹೈಪೋಥೆಲಾಮಸ್ ಮಾಡುವ ಕೆಲಸ

(1) ದೈಹಿಕ - ಮಾನಸಿಕ ಆರೋಗ್ಯಕ್ಕೆ ಸಹಕಾರಿ

(2) ಸ್ವಯಂ ನಿಯಂತ್ರಿತ ವ್ಯವಸ್ಥೆ

(3) ವ್ಯಕ್ತಿ ನಿದ್ರೆಮಾಡುವಂತೆ ಅಥವಾ ಎಚ್ಚರವಾಗಿರುವಂತೆ

(4) ಒಂದು ನಿರ್ದಿಷ್ಟ ಕ್ರಮರೂಪಿಸುವುದು

**148.** ಮಿದುಳಿನ ಕಾಂಡದಲ್ಲಿರುವ ನ್ಯೂಕ್ಲಿಯೈ ಆಫ್ ರ‍್ಯಾಫ್ ಎಂಬ ಭಾಗ ಸೆರೋಟೊನಿನ್ ಎಂಬ ನರವಾಹಕವನ್ನು ಸ್ರವಿಸಿ __________ ಉಂಟು ಮಾಡುವುದೆಂದು ನಂಬಲಾಗಿದೆ.

(1) REM ರ‍್ಯಾಪಿಡ್ ಐ ಮೂವ್‌ಮೆಂಟ್ ನಿದ್ದೆ

(2) ಸ್ಲೋವೇವ್ ನಿದ್ದೆ ಅಥವಾ ನಾನ್‌ರ‍್ಯಾಪಿಡ್ ಐಮೂವ್‌ಮೆಂಟ್ ನಿದ್ದೆ

(3) ಕನಸುಗಳು

(4) ಗಾಢ ನಿದ್ದೆ

**149.** ವರ್ತಮಾನ ಕಾಲದ ಕ್ರಿಯಾಪದದ ಉದಾಹರಣೆ

(1) ಬೇಕು

(2) ನಂಬಲಾಗಿದೆ

(3) ನೋಡೋಣ

(4) ಕಾಯ್ದುಕೊಳ್ಳುತ್ತೇವೆ

**150.** ಇವುಗಳಲ್ಲಿ ಅಚ್ಚ ಕನ್ನಡ ಶಬ್ದ ವನ್ನು ಗುರುತಿಸಿ

(1) ಪಿಟ್ಯೂಟರಿ

(2) ಚಕ್ರ

(3) ಶುರು

(4) ಬೆಳಗ್ಗೆ

# SPACE FOR ROUGH WORK

***ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :***

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. OMR ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆ ಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
9. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
10. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
12. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. *ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.***

**READ CAREFULLY THE FOLLOWING INSTRUCTIONS :**

1. Out of the four alternatives for each question, only one circle for the correct answer is to be darkened completely with Blue/Black Ball Point Pen on Side-2 of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet / Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
6. Each candidate must show on demand his / her Admission Card to the Invigilator.
7. No candidate, without special permission of the Superintendent or Invigilator, should leave his / her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet a second time will be deemed not to have handed over the Answer Sheet and dealt with as an unfair means case.
9. Use of Electronic / Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room / Hall. *The candidates are allowed to take away this Test Booklet with them.***

SEAL

**निम्नलिखित निर्देश ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के पृष्ठ-2 पर केवल एक वृत्त को ही पूरी तरह नीले/काले बॉल पॉइन्ट पेन से भरें । एक बार उत्तर अंकित करने के बाद उसे बदला नहीं जा सकता है ।
2. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर पत्र में निर्धारित स्थान के अतिरिक्त अन्यत्र न लिखें ।
3. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
4. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
5. परीक्षार्थी द्वारा परीक्षा हॉल/कक्ष में प्रवेश कार्ड के सिवाय किसी प्रकार की पाठ्य सामग्री, मुद्रित या हस्तलिखित, काग़ज़ की पर्चियाँ, पेजर, मोबाइल फ़ोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
8. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा ।
9. इलेक्ट्रॉनिक / हस्तचालित परिकलक का उपयोग वर्जित है ।
10. परीक्षा-हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
11. किसी हालत में परीक्षा पुस्तिका और उत्तर पत्र का कोई भाग अलग न करें ।
12. **परीक्षा सम्पन्न होने पर, परीक्षार्थी कक्ष / हॉल छोड़ने से पूर्व उत्तर पत्र कक्ष-निरीक्षक को अवश्य सौंप दें । *परीक्षार्थी अपने साथ इस परीक्षा पुस्तिका को ले जा सकते हैं ।***